# ಅಧ್ಯಾಪಕರ ಸಂಘ 2017-18

ಪ್ರತಿವರ್ಷದಂತೆ ಅಧ್ಯಾಪಕರ ಕಾರ್ಯಕಾರಿಣಿ ಸದಸ್ಯರ ಆಯ್ಕೆಯೊಂದಿಗೆ ಈ ವರ್ಷದ ಅಧ್ಯಾಪಕರ ಸಂಘ ಕಾರ್ಯಚಟುವಟಿಕೆಗಳು ಆರಂಭವಾದವು. ದಿನಾಂಕ 7-9-2017 ರಂದು ವರ್ಷದ ಮೊದಲ ಅಧ್ಯಾಪಕರ ಸಭೆ ನಡೆಸಿ ಸಮಿತಿಯ ಸದಸ್ಯರನ್ನು ಆಯ್ಕೆಮಾಡಲಾಯಿತು. ಡಾ. ಸ್ವಾಮಿ ಎಂ. ಅಧ್ಯಕ್ಷರಾಗಿ, ಶ್ರೀ ಡಿ. ಶಿವಮೂರ್ತಿ ಕಾರ್ಯದರ್ಶಿಯಾಗಿ, ಶ್ರೀ ಪ್ರಶಾಂತ್‌ಕುಮಾರ್ ಬಿ.ಎನ್. ಖಜಾಂಚಿಯಾಗಿ, ಶ್ರೀಮತಿ ಚಂದ್ರಕಲಾ ಸಹಕಾರ್ಯದರ್ಶಿಯಾಗಿ ಆಯ್ಕೆಯಾದರು.

ದಿನಾಂಕ 28-09-2017 ರಂದು ಕಾಲೇಜಿನ ಪ್ರಾಚಾರ್ಯರಾಗಿದ್ದ ಡಾ. ದೇವಿದಾಸ್ ಎಸ್. ನಾಯಕ್ ಇವರಿಗೆ ಸಂಘದ ವತಿಯಿಂದ ಗೌರವಿಸಿ ಬೀಳ್ಕೊಡುಗೆ ಕಾರ್ಯಕ್ರಮವನ್ನು ಡಾ. ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ದಿನಾಂಕ 01-01-2018ರ ಸೋಮವಾರ ಮಧ್ಯಾಹ್ನ 3-30ಕ್ಕೆ ಸಂಘದ ಸಭೆಯನ್ನು ನಡೆಸಿ ಅಧ್ಯಕ್ಷರಾಗಿದ್ದ ಡಾ. ಸ್ವಾಮಿಯವರು ಕಾಲೇಜಿನ ಪ್ರಾಂಶುಪಾಲರಾಗಿ ನಿಯೋಜನೆಗೊಂಡಿದ್ದರಿಂದ ಅವರಿಗೆ ಅಭಿನಂದಿಸಿ ನೂತನ ಅಧ್ಯಕ್ಷರನ್ನಾಗಿ ಶ್ರೀ ವಿದ್ಯಾಧರ್ ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ ಇವರನ್ನು ಸರ್ವಾನುಮತದಿಂದ ತೀರ್ಮಾನ ತೆಗೆದುಕೊಳ್ಳಲಾಯಿತು.

ದಿನಾಂಕ 07-02-2018ರಂದು ಬುಧವಾರ ಮಧ್ಯಾಹ್ನ 3-30ಕ್ಕೆ ಸಂಘದ 3ನೇ ಸಭೆಯನ್ನು ಶ್ರೀಯುತ ವಿದ್ಯಾಧರ ಇವರ ಅಧ್ಯಕ್ಷತೆಯಲ್ಲಿ ನಡೆಸಿದ್ದು, ಸಂಘದ ವತಿಯಿಂದ ಒಂದು ದಿನದ ಪ್ರವಾಸ ಹಾಗೂ ಸಂಘದ ವಾರ್ಷಿಕೋತ್ಸವ ಸಮಾರಂಭದ ದಿನಾಂಕವನ್ನು ನಿಗದಿಪಡಿಸಲಾಯಿತು.

ಅಧ್ಯಾಪಕರ ಸಂಘದಿಂದ ದಿನಾಂಕ 18-02-2018 ರಂದು ಸೆಂಟ್‌ಮೇರಿಸ್ ಐಲ್ಯಾಂಡ್‌ಗೆ ಒಂದು ದಿನದ ಪ್ರವಾಸದಲ್ಲಿ ಸದಸ್ಯರು ಮತ್ತು ಅವರ ಕುಟುಂಬದವರು ಪಾಲ್ಗೊಂಡ ಪ್ರವಾಸವು ಯಶಸ್ವಿಯಾಗಿರುತ್ತದೆ.

ದಿನಾಂಕ 20-03-2018 ರಂದು ಅಧ್ಯಾಪಕರ ಸಂಘದ ವಾರ್ಷಿಕೋತ್ಸವ ಕಾರ್ಯಕ್ರಮದ ಅಂಗವಾಗಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಯಿತು. ಈ ಕ್ರೀಡೆಗಳನ್ನು ನಮ್ಮ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀಯುತ ಲೋಕೇಶ್ ಎಂ.ವಿ. ಯಶಸ್ವಿಯಾಗಿ ನಡೆಸಿಕೊಟ್ಟಿರುತ್ತಾರೆ. ಅವರಿಗೆ ಅಧ್ಯಾಪಕರ ಸಂಘದ ವತಿಯಿಂದ ಅಭಿನಂದನೆಗಳು.

ದಿನಾಂಕ 20-03-2018ರ ಮಂಗಳವಾರ ಸಂಜೆ 5-30ಕ್ಕೆ ಅಧ್ಯಾಪಕರ ಸಂಘದ ವಾರ್ಷಿಕೋತ್ಸವ ನಡೆಸಲಾಯಿತು. ಈ ಸಂದರ್ಭದಲ್ಲಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಮನೋರಂಜನಾ ಕ್ರೀಡೆಗಳನ್ನು ನಡೆಸಿ ಬಹುಮಾನ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ವಿದ್ಯಾಧರ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಸ್ವಾಮಿಯವರು ಮುಖ್ಯಅತಿಥಿಗಳಾಗಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಪ್ರಶಾಂತ್ ಎ.ಜಿ. ಉಪಸ್ಥಿತರಿದ್ದರು. ಕು॥ ಶಾರದಾ ಪ್ರಾರ್ಥಿಸಿದರು, ಡಿ. ಶಿವಮೂರ್ತಿ ಸ್ವಾಗತ ಹಾಗೂ ಪ್ರಶಾಂತ್‌ಕುಮಾರ್ ವಂದನೆ ಮತ್ತು ಶ್ರೀಮತಿ ಚಂದ್ರಕಲಾ ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಯಲ್ಲಿ ಪಾಲ್ಗೊಂಡು ವಿಜೇತರಾದ ಅಧ್ಯಾಪಕ ಮಿತ್ರರಿಗೆ ಆಕರ್ಷಕ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ಮತ್ತು ಕಳೆದ ವರ್ಷ ನಮ್ಮ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಉಪನ್ಯಾಸಕರುಗಳಾದ ಶ್ರೀ ಅಕ್ಷಯ್, ಶ್ರೀಮತಿ ವಾಣಿ ರೇವಡಿ, ಶ್ರೀಮತಿ ವಿದ್ಯಾಗಣೇಶ್, ಶ್ರೀ ಕೇಶವಮೂರ್ತಿ, ಶ್ರೀ ಭಾರದ್ವಾಜ್ ಹಾಗೂ ಕಾಲೇಜಿನ ಬೋಧಕೇತರರಾದ ಶ್ರೀ ಸುಬ್ರಹ್ಮಣ್ಯ, ಶ್ರೀ ನಿಂಗಪ್ಪ ಇವರನ್ನು ಸನ್ಮಾನಿಸಿ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. 2017-18ನೇ ಸಾಲಿನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಲಾಯಿತು.